# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶನಿವಾರ, ೧೮, ಏಪ್ರಿಲ್, ೨೦೨೬ (ಚೈತ್ರ, ೨೮, ಶಕವರ್ಷ, ೧೯೪೮)<br>BENGALURU, SATURDAY, 18, APRIL, 2026 (CHAITHRA, 28, SHAKAVARSHA, 1948) | ನಂ. ೨೯೦<br>No. 290 |
|---|---|---|


### ಕರ್ನಾಟಕ ಸರ್ಕಾರ

ಸಂಖ್ಯೆ: RDPR 2 ZPS 2026

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 18.04.2026.

### <u>ಅಧಿಸೂಚನೆ</u>

ಸರ್ಕಾರದ ಈ ಕೆಳಕಂಡ ಅಧಿಸೂಚನೆಗಳಲ್ಲಿ ರಾಯಚೂರು, ಕಲಬುರಗಿ, ಬೆಳಗಾವಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿನ ತಾಲ್ಲೂಕುಗಳ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳ ಚುನಾಯಿತ ಸದಸ್ಯರ ಸಂಖ್ಯೆಯನ್ನು ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿಗಳನ್ನು ನಿರ್ಣಯಿಸಿ, ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿತ್ತು.

| ಕ್ರ.ಸಂ | ಜಿಲ್ಲಾ ಪಂಚಾಯತ್ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ತಾಲ್ಲೂಕು ಪಂಚಾಯಯತ್ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಜಿಲ್ಲೆಯ ಹೆಸರು |
|---|---|---|---|
| 01 | ಗ್ರಾಅಪ 356 ಜಿಪಸ 2023, ದಿನಾಂಕ: 16.12.2023. | ಗ್ರಾಅಪ 61 ತಾಪಸ 2023, ದಿನಾಂಕ: 16.12.2023. | ರಾಯಚೂರು |
| 02 | ಗ್ರಾಅಪ 353 ಜಿಪಸ 2023, ದಿನಾಂಕ: 16.12.2023. | ಗ್ರಾಅಪ 58 ತಾಪಸ 2023 , ದಿನಾಂಕ: 16.12.2023. | ಕಲಬುರಗಿ |
| 03 | ಗ್ರಾಅಪ 347 ಜಿಪಸ 2023, ದಿನಾಂಕ: 16.12.2023. | ಗ್ರಾಅಪ 51 ತಾಪಸ 2023, ದಿನಾಂಕ: 16.12.2023. | ಬೆಳಗಾವಿ |
| 04 | ಗ್ರಾಅಪ 336 ಜಿಪಸ 2023, ದಿನಾಂಕ: 16.12.2023. | ಗ್ರಾಅಪ 40 ತಾಪಸ 2023, ದಿನಾಂಕ: 16.12.2023. | ಚಿತ್ರದುರ್ಗ |

ಕಂದಾಯ ಇಲಾಖೆಯ ಅಧಿಸೂಚನೆಗಳಿಂದ ರಾಯಚೂರು, ಕಲಬುರಗಿ ಮತ್ತು ಬೆಳಗಾವಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಒಂದು ತಾಲ್ಲೂಕಿನಿಂದ ಮತ್ತೊಂದು ತಾಲ್ಲೂಕಿಗೆ ಕೆಲವು ಗ್ರಾಮಗಳನ್ನು ಸೇರ್ಪಡೆ ಮಾಡಿ ಹಾಗೂ ನಗರಾಭಿವೃದ್ಧಿ ಇಲಾಖೆಯು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೆರಿಸಿ ಅಧಿಸೂಚಿಸಿ, ಕರ್ನಾಟಕ ರಾಜ್ಯ ಪತ್ರಗಳಲ್ಲಿ ಪ್ರಕಟಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಬದಲಾವಣೆಗೊಂಡ ಗ್ರಾಮಗಳನ್ನು ಸರ್ಕಾರದ ಅಧಿಸೂಚನೆಗಳ ದಿನಾಂಕ:16.12.2023 ರಲ್ಲಿ ಹೊರಡಿಸಿರುವ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಯಿಂದ ಕೈಬಿಡಬೇಕಾಗಿರುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 121 ಮತ್ತು ಪ್ರಕರಣ 160 ರನ್ವಯ ಅನುಕ್ರಮವಾಗಿ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳ ಚುನಾಯಿತ ಸದಸ್ಯರ ಸಂಖ್ಯೆಯನ್ನು ಗ್ರಾಮೀಣ ಜನಸಂಖ್ಯೆಯ ಆಧಾರದ ಮೇಲೆ ಹಾಗೂ ಪ್ರಕರಣ 124 ಮತ್ತು ಪ್ರಕರಣ 163 ರನ್ವಯ ಅನುಕ್ರಮವಾಗಿ ತಾಲ್ಲೂಕು ಪಂಚಾಯತಿ ಹಾಗೂ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಜಿಲ್ಲಾ ಪಂಚಾಯತಿಗಳ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನು ರಚಿಸಬೇಕಾಗಿರುವುದರಿಂದ ರಾಯಚೂರು, ಕಲಬುರಗಿ, ಬೆಳಗಾವಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿನ ತಾಲ್ಲೂಕುಗಳ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ / ಗಡಿ ನಿರ್ಣಯದ ಈ ಕೆಳಕಂಡ ಸರ್ಕಾರದ ಅಧಿಸೂಚನೆಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ಹಿಂಪಡೆದಿದೆ.

| ಕ್ರ.ಸಂ | ಜಿಲ್ಲೆ ಪಂಚಾಯತ್ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ತಾಲ್ಲೂಕು ಪಂಚಾಯಯತ್ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಜಿಲ್ಲೆಯ ಹೆಸರು |
|---|---|---|---|
| 01 | ಗ್ರಾಅಪ 356 ಜಿಪಸ 2023, ದಿನಾಂಕ: 16.12.2023. | ಗ್ರಾಅಪ 61 ತಾಪಸ 2023, ದಿನಾಂಕ: 16.12.2023. | ರಾಯಚೂರು |
| 02 | ಗ್ರಾಅಪ 353 ಜಿಪಸ 2023, ದಿನಾಂಕ: 16.12.2023. | ಗ್ರಾಅಪ 58 ತಾಪಸ 2023, ದಿನಾಂಕ: 16.12.2023. | ಕಲಬುರಗಿ |
| 03 | ಗ್ರಾಅಪ 347 ಜಿಪಸ 2023, ದಿನಾಂಕ: 16.12.2023. | ಗ್ರಾಅಪ 51 ತಾಪಸ 2023, ದಿನಾಂಕ: 16.12.2023. | ಬೆಳಗಾವಿ |
| 04 | ಗ್ರಾಅಪ 336 ಜಿಪಸ 2023, ದಿನಾಂಕ: 16.12.2023. | ಗ್ರಾಅಪ 40 ತಾಪಸ 2023, ದಿನಾಂಕ: 16.12.2023. | ಚಿತ್ರದುರ್ಗ |

ಮುಂದುವರೆದು, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಪರಿಷ್ಕೃತ ಸದಸ್ಯರ ಸಂಖ್ಯೆಯನ್ನು ಹಾಗೂ ಸೀಮಾ/ಗಡಿಗಳನ್ನು ನಿಯಮಾನುಸಾರ ರಚಿಸುವುದು.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಡಾ||ಎನ್. ನೋಮೇಶ್ ಕುಮಾರ್)**
ನಿರ್ದೇಶಕರು (ಪಂ.ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ದಿ ಮತ್ತು ಪಂ.ರಾಜ್ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH